# ಇಲ್ಲಿರಲಾರೆ ಅಲ್ಲಿಗೆ ಪೋಗಲಾರೆ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Note:** The lyrics given in the book mentioned in Ref. 2 & Ref. 3 above are similar to that of the singer. They are given without any highlights. But the lyrics are different in the book mentioned in Ref. 1 above. They are given separately in green highlights.

| | |
|---|---|
| ರಾಗ ರೇಗುಪ್ತಿ ತಾಳ ಅಟ್ಟ | ರಾಗ ಮಧ್ಯಮಾವತಿ ತಾಳ ಅಟ್ಟ |
| | |
| ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ | ಇಲ್ಲಿರಲಾರೆ ಅಲ್ಲಿಗೆ ಪೋಗಲಾರೆ |
| ಫುಲ್ಲನಾಭ ನೀನಿದ್ದಲ್ಲಿ ಸೇರಿಸೆನ್ನ ‖ ಪ ‖ | ಫುಲ್ಲನಾಭನೆ ನೀನಿದ್ದಲ್ಲಿ ಇರಿಸೆನ್ನ |
| | |
| ಮರಣವನೊಲ್ಲೆ ಜನನವನೊಲ್ಲೆ | ಮರಳಿ ಮರಳಿ ಜನ್ಮ ಮರಣವನೊಲ್ಲೆ |
| ದುರಿತ ಸಂಸಾರ ಕೋಟಲೆಯ ನಾನೊಲ್ಲೆ | ದುರಿತ ಕೋಟಲೆಯ ಸಂಸಾರವನೊಲ್ಲೆ |
| ಕರುಣದಿ ಕರುಗಳ ಕಾಯ್ದ ಗೋವಳ ನಿನ್ನ | ತುರುಕಾದು ಕೊಳಲನೂದುವ ಮುರಮರ್ದನ |
| ಚರಣ ಕಮಲದ ಸ್ಮರಣೆಯೊಳಿರಿಸೆನ್ನ ‖ ೧ ‖ | ಚರಣ ಕಮಲಗಳ ಸ್ಮರಣೆಯೊಳಿರಿಸೆನ್ನ |
| | |
| ಬೆಂದ ಸಂಸಾರೆಂಬೋ ಬೇನೆ ಮಧ್ಯದಲ್ಲಿ | ಬಂದು ಸಂಸಾರದ ಬೇನೆಯೊಳಗೆ ಬಿದ್ದು |
| ನೊಂದೆನೊ ನಾ ಬಹಳ ಕರೆಕರೆಯಲ್ಲಿ | ನೊಂದೆನು ಕಡು ಮೋಹದಿಂದ ನಾ ಬೆಂದು |
| ನಂದಗೋಪನ ಕಂದ ವೃಂದಾವನ ಪ್ರಿಯ | ನಂದ ಗೋಪನ ಕಂದ ವೃಂದಾವನಪ್ರಿಯ |
| ಎಂದೆಂದು ನಿನ್ನ ಸ್ಮರಣೆಯೊಳಿರಿಸೆನ್ನ ‖ ೨ ‖ | ಎಂದೆಂದು ತವಪಾದ ಸ್ಮರಣೆಯೊಳಿರಿಸೆನ್ನ |
| | |
| ಪುತ್ರ ಮಿತ್ರ ಕಳತ್ರ ಬಂಧುಗಳೆಂಬ | ಪುತ್ರ ಪೌತ್ರರು ಬಂಧು ಮಿತ್ರ ಬಾಂಧವರೆಂದು |
| ಕತ್ತಲೆಯೊಳು ಸಿಲುಕಿ ಕಡು ನೊಂದೆನಲ್ಲ | ಕತ್ತಲೆಯೊಳು ಕಡು ನೊಂದೆನಯ್ಯ |

| | |
|---|---|
| ಮುಕ್ತಿದಾಯಕ ಉಡುಪಿಯ ಕೃಷ್ಣರಾಯ | ಸತ್ಯ ಮೂರುತಿ ಶ್ರೀ ಉಡುಪಿಯ ಶ್ರೀ ಕೃಷ್ಣ |
| ಭಕ್ತವತ್ಸಲ ಶ್ರೀ ಪುರಂದರ ವಿಠಲ ‖ ೩ ‖ | ಭಕ್ತ ವತ್ಸಲ ಶ್ರೀ ಪುರಂದರ ವಿಠ್ಠಲ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಫುಲ್ಲನಾಭ** – ತಾವರೆಯ ಹೂವೇ ಹೊಕ್ಕುಳಾಗಿ ಉಳ್ಳವನು, ವಿಷ್ಣು.

**ಗೋವಳ** – ಗೋಪಾಲ, ಕೃಷ್ಣ

**ಕಳತ್ರ** – ಪತ್ನಿ, ಹೆಂಡತಿ

**ಕತ್ತಲೆಯೊಳು** – ಮಮಕಾರ ಮೋಹದಲ್ಲಿ.

**Classification:** Keerthane
**Ankita:** sri purandara vittala
**Location:** Udupi, Karnataka State
**Category:** Bhakti
**Group Words:** janana, marana, samsara, karune, govu, padma, Krishna, vrindavana, mukti,
**Pravachana:** NA
**Explanation:** NA